ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ,

ಮುಳಬಾಗಿಲು

ಸಿ.ಸಿ. ಸಂಖ್ಯೆ: 629 /2020

ಸಿ.ಡಬ್ಲೂ: 1 ಪಿ.ಡಬ್ಲೂಃ 1

ಪ್ರಮಾಣೀಕರಿಸಿದ ದಿನಾಂಕಃ 02.09.2025

| | |
|---|---|
| ಹೆಸರು | ಪ್ರಹ್ಲಾದ್ |
| ತಂದೆ/ಗಂಡನ ಹೆಸರು | ವೀರಣ |
| ವಯಸ್ಸು | 59 |
| ವೃತ್ತಿ | ಸಿ ಎ ಓ , ಹುಣಸಮಾರನಹಳ್ಳಿ ಪುರ ಸಭೆ |
| ವಾಸ | ಬೆಂಗಳೂರು |

ಮುಖ್ಯ ವಿಚಾರಣೆಃ- ಮಾನ್ಯ ಸಹಾಯ ಸರ್ಕಾರಿ ಅಭಿಯೋಜಕರವರಿಂದಃ-

ನಾನು ಮುಳಬಾಗಿಲಿನಲ್ಲಿ 2016 ರಿಂದ 2018 ರವರೆಗೆ ಪೌರಾಯುಕ್ತರಾಗಿ ಕೆಲಸ ಮಾಡಿರುತ್ತೇನೆ.

ಚಾಸಾ 2 ಮತ್ತು ಅರೋಾಪಿ ಗೊತ್ತು. ನಗರ ಸಭೆ ಸದಸ್ಯರು ನೀಡಿದ ಪತ್ರದ ದೃಡೀಕೃ ತ ನಕಲನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಎಂದು ಗುರುತಿಸಲಾಯಿತು. ನಗರ ಸಬೆ, ಸದಸ್ಯರು ಖಾತೆ ಸಂಖ್ಯೆ 9923/5 ಸಂಬಂದ ನಕಲಿ ದಾಖಲೆಗಳನ್ನು ಸೃಷ್ಟಿಸಿರುವ ಬಗ್ಗೆ ನಿಪಿ 1 ರಂತೆ ದೂರು ನೀಡಿರುತ್ತಾರೆ. ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ 2 ಎಂದು ಸಹಿಯನ್ನು ನಿಪಿ 2 (ಎ) ಎಂದು ಗುರುತಿಸಲಾಯಿತು. ನವಾಜ್ ಪಾಷಾ ರವರು ಚಾಸಾ 2 ರವರಿಗೆ ನಕಲಿ ದಾಖಲೆಗಳನ್ನು ಸೃಷ್ಟಿಸಿ ಕ್ರಯಪತ್ರ ಮಾಡಿಕೊಟ್ಟಿರುವ ಬಗ್ಗೆ ನಗರಸಭೆ ಸದಸ್ಯರು ಕೋರಿಕೆ ಪತ್ರ ನೀಡಿದ ಕಾರಣ ನಿಪಿ 1 ರಂತೆ ದೂರು ನೀಡಿರುತ್ತೇನೆ. ಪೋಲಿಸರು ನನ್ನನ್ನು ವಿಚಾರಣೆ ಮಾಡಿ ಮುಂದುವರೆದ ಹೇಳಿಕೆಯನ್ನು ಪಡೆದಿರುತ್ತಾರೆ.

(ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಬಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುತ್ತಾರೆ. ಅವರ ಮನವಿಯನ್ನು ಪರಿಗಣಿಸಿ ಸಾಕ್ಷಿಯ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

2

ಪಾಟೀ ಸವಾಲುಃ- ಮಾನ್ಯ ಸಹಾಯ ಸರ್ಕಾರಿ ಅಭಿಯೋಜಕರವರಿಂದಃ-

ಅರೋಪಿ ಚಾಸಾ 2 ರವರಿಗೆ ವಂಚನೆ ಮಾಡುವ ಉದ್ದೇಶದಿಂದ ಖಾತೆ ನಂ 9923/5 ಖಾತೆಗೆ ಸಂಬಂದಿಸಿದಂತೆ ನಕಲು ದಾಖಲೆಗಳನ್ನು ಸೃಷ್ಟಿಸಿ ಅದು ನೈಜ್ಯವೆಂದು ಉಪಯೋಗಿಸಿ ನೋಂದಣಿ ಮಾಡಿಸಿರುವ ಬಗ್ಗೆ ದೂರು ನೀಡಿರುತ್ತೇನೆ ಎಂದರೆ ಸರಿ . ಸದರಿ ದಾಖಲೆಗಳನ್ನು ನಮ್ಮ ಕಛೇರಿಯಲ್ಲಿ ನೀಡಿರುವುದಿಲ್ಲ ಎಂದರೆ ಸರಿ . ಸದರಿ ಸ್ವತ್ತಿಗೆ ಸಂಬಂದಿಸಿದಂತೆ

ಅರೋಪಿ ನೋಂದಣಿ ಮಾಡಿಕೊಟ್ಟಿರುವ ಇ ಖಾತೆ ನಂ 562 ಃ 616/6 ದಿನಾಂಕ 21.07.2017 ಕಛೇರಿಯಲ್ಲಿ ಇರುವುದಿಲ್ಲ. ಅರೋಪಿ ಸೃಷ್ಟಿ ಮಾಡಿರುವ ಎಲ್ಲಾ ದಾಖಲೆಗಳನ್ನು ಪೋಲಿಸರಿಗೆ ನೀಡಿರುತ್ತೇನೆ ಎಂದರೆ ಸರಿ . ನಗರ ಸಭೆಗೆ ಟೇಟರಿಂಗ್ ಕಾಂಟ್ರಾಂಕ್ಟ್ ಪಡೆದಿದ್ದು ಸುಬ್ರಮಣಿ ಅಚಾರಿ ಅರೋಪಿಯೋಂದಿಗೆ ಸೇರಿ ಚಾಸಾ 2 ರವರಿಗೆ ಮೋಸ ಮಾಡುವ ಉದ್ದೇಶದಿಂದ ದಾಖಲೆಗಳನ್ನು ಸೃಷ್ಟಿಸಿರುತ್ತಾರೆ ಎಂದರೆ ಇರಬಹುದು.

ಪಾಟೀ ಸವಾಲುಃ- ಆರೋಪಿ ಪರ ಸಿ ಎಸ್ ಎನ್ ವಕೀಲರಿಂದಃ- ಕಾಲಾವಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).

ಓದಿ ಹೇಳಿ ಕೇಳಿ ಸರಿ ಇದೆ

ಸಹಿ/-
(ಹರೀಶ್ ಜಿ )
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಮುಳಬಾಗಿಲು